SATYAVADI Founded 1917 Regd. No. M 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂವತ್ಸರ 29 ಸಂಚಿಕೆ 170 | ಸೋಮವಾರ 18—3—46 | ಬಿಡಿ ಪ್ರತಿ 6 ಪೈ

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಯರಿಂದ)

ಮೇಷ— ಮನೋಲ್ಲಾಸವುಂಟು, ಆಪ್ತೇಷ್ಟರೊಂದಿಗೆ ಸರಸಸಲ್ಲಾಪಗಳುಂಟು. ದೇಹಾರೋಗ್ಯವುಂಟು. ಧರ್ಮ ಕಾರ್ಯಗಳಲ್ಲಿ ಆಸಕ್ತಿಯುಂಟು.

ವೃಷಭ— ಆರೋಗ್ಯ ಸಾಧಾರಣ, ವ್ಯವಹಾರದಲ್ಲಿ ಸ್ವಲ್ಪ ತೊಂದರೆ, ವೃಥಾ ಕಾಲಹರಣ ಮಾಡಬೇಡಿ.

ಮಿಥುನ— ಮನೋ ದುರ್ಬಲತೆಯನ್ನು ದೂರಮಾಡಲು ಯತ್ನಿಸಿರಿ ಆರೋಗ್ಯವೇನೋ ಚನ್ನಾಗಿರುತ್ತದೆ. ವ್ಯವಹಾರದಲ್ಲಿ ಸ್ವಲ್ಪ ತೊಂದರೆ. ಆದಾಯವೂ ಚನ್ನಾಗಿರುತ್ತದೆ.

ಕರ್ಕಾಟಕ — ವ್ಯವಹಾರದಲ್ಲಿ ಜಾಗ್ರತೆಯಿಂದ ವರ್ತಿಸಿರಿ. ಇಲ್ಲದಿದ್ದಲ್ಲಿ ಕಷ್ಟವು ಸಂಭವಿಸಬಹುದು.

ಸಿಂಹ — ಮನಸ್ಸು ಅಹ್ಲಾದಕರವಾಗಿರುತ್ತದೆ ಆರೋಗ್ಯ ಲಾಭವೂ ಆರ್ಥಿಕ ಲಾಭವೂ ವ್ಯವಹಾರದಲ್ಲಿ ಕೀರ್ತಿಯೂ ಉಂಟು.

ಕನ್ಯಾ — ಶಾರೀರಿಕ ಮಾನಸಿಕ ಸಾಂಪತ್ತಿಕ ಸ್ಥಿತಿಗಳು ಉತ್ತಮವಾಗಿರುತ್ತವೆ. ವ್ಯವಹಾರದಲ್ಲಿ ಯಶಪ್ರಾಪ್ತಿ.

ತುಲಾ — ಮಾನಸಿಕ ಸ್ಥಿತಿಯು ಉತ್ತಮವಾಗಿರುತ್ತದೆ ಶರೀರವು ಉತ್ತಮವಾಗಿರತ್ತವೆ. ಆದಾಯವೂ ಉಂಟು.

ವೃಶ್ಚಿಕ — ಶರೀರಕ್ಕೆ ತೊಂದರೆ ತೊಂದರೆಯಾಗುವ ಸಂಭವವಿದೆ. ವ್ಯವಹಾರದಲ್ಲಿಯೂ ಕಷ್ಟವೂ ಕಾಣಬರುತ್ತದೆ.

ಧನಸ್ಸು — ಮನಸ್ಸು ಏನೇನೂ ಚನ್ನಾಗಿರುವುದಿಲ್ಲ. ಆರೋಗ್ಯವೂ ಹಾಗೆಯೇ ಇರುತ್ತದೆ. ವ್ಯವಹಾರದಲ್ಲಿ ದಲ್ಲಿ ಕೂಡಾ ಹರ್ಷವಿರುವುದಿಲ್ಲ.

ಮಕರ — ಆರ್ಥಿಕ ಲಾಭವುಂಟು. ಶರೀರ ಸ್ಥಿತಿ. ಉತ್ತಮವಿರುತ್ತದೆ ವ್ಯವಹಾರದಲ್ಲಿ ಸನ್ಮಾರ್ಗವೆ ದೊರೆಯುವುದು

ಕುಂಭ— ಲಾಭನಷ್ಟಗಳು ಸಮವಾಗಿರುವವು. ಆರೋಗ್ಯ ಪರವಾಯಿಲ್ಲ.

ಮೀನ— ಸಂಸಾರ ಸಂಬಂಧ ವಿಚಾರಗಳನ್ನು ತಲೆಗೆ ಹಚ್ಚಿಕೊಂಡು ವ್ಯಥೆಪಡಬೇಡಿ.

ಚಿನ್ನಾ ಬೆಳ್ಳಿ ಧಾರಣೆ

ಸವರ್ನ 1 ಕ್ಕೆ	ರೂ. 64-0-0
ಚಿನ್ನ ತೊಲ 1 ಕ್ಕೆ	94-12-0
ಬೆಳ್ಳಿ	1-9-0

ಭಾರತಕ್ಕೆ ಬ್ರಿಟಿಷ್ ಮಂತ್ರಿ ನಿಯೋಗ

ಗಾಂಧೀಜೀಗೆ ಲಾರೆನ್ಸರ ವೈಯುಕ್ತಿಕ ಆಹ್ವಾನ !

ಬೊಂಬಾಯಿ, ಮಾ 16 — ಭಾರತಕ್ಕೆ ಆಗಮಿಸುವ ಬ್ರಿಟಿಷ್ ಮಂತ್ರಿ ಮಂಡಲ ನಿಯೋಗದೊಡನೆ, ಕಾಂಗ್ರೆಸ್ ಸರವಾಗಿ ಸಂಧಾನ ನಡೆಸಲು ಅಧ್ಯಕ್ಷ ಆಜಾದರಿಗೆ ಸಂಪೂರ್ಣ ಅಧಿಕಾರವನ್ನು ವಹಿಸಿರುವುದಾಗಿ ಕಾಂಗ್ರೆಸ್ ಆವರಣದಲ್ಲಿ ಮಾತುಕತೆಗಳಾಗುತ್ತಿರುವುದಾಗಿಯು, ಪಿ. ಐ. ವಿಶೇಷ ಪ್ರತಿನಿಧಿಗೆ ತಿಳಿದುಬಂದಿರುವುದಾಗಿ ಪ್ರಕಟವಾಗಿದೆ.

ಂ ಂ

ಪ್ರಾರಂಭದ ಮಾತುಕತೆಗಳು ನಡೆಯುವಿಕೆಗಾಗಿ ಮಾರ್ಚಿ ತಾ || 25 ರ ಹೊತ್ತಿಗೆ ಬ್ರಿಟಿಷ್ ಮುತ್ಸದ್ದಿ ಮಂಡಲ ನಿಯೋಗವು ಅಧ್ಯಕ್ಷ ಆಜಾದರಿಗೆ ಸ್ವಾಗತ ಕೊಡುವುದಾಗಿ ತಿಳಿಯಬಂದಿದೆ. ಪ್ರಮುಖ ರಾಜಕೀಯ ವಿಚಾರ ವಿನಿಮಯಕ್ಕಾಗಿ ನುಹಾತ್ಮ ಗಾಂಧೀಜೀಯವರು ಭಾರತದ ಕಾರ್ಯದರ್ಶಿ ಲಾರ್ಡ್ ಪೆಥಿಕ್ ಲಾರೆನ್ಸರಿಂದ ವೈಯುಕ್ತಿಕವಾಗಿ ಆಹ್ವಾನಿಸಲ್ಪಡುವುದಾಗಿ ತಿಳಿಯಬಂದಿದೆ.

ಂ ಂ

ನವದೆಹಲಿ, ಮಾ 17 — ವೈಸ್ರಾಯಿ ಲಾರ್ಡ್ ವೇವಲ್ಲರ ಅಳಿಯಂದಿರಾದ ಮೇಜರ್ ಆಸ್ಲೆಯವರು ಕ್ವೆಟ್ಟಾಬ್ದದಲ್ಲಿ ಮೋಟಾರು ಆಪಘಾತದಲ್ಲಿ ಮಡಿದರೆಂದು ತಿಳಿಯಬಂದಿದೆ.

ಂ ಂ

ಸಂಧಾನ ನಡೆಸುವ ಕಾಲಾಕಾಲಗಳನ್ನು ಮುಖಂಡರು ಬಲ್ಲರೆಂದು ಹೇಳಲಾಗಿದೆ.

ಎಸ್ಟೋನಿಯಾ ಹಕ್ಕಿನ ಸಂಬಂಧದ ಹೋರಾಟವೇ ರಷ್ಯಾ ಕಣ್ಣು ಪರ್ಷಿಯಾ ಮೇಲಿರುವುದಕ್ಕೆ ಕಾರಣವೆಂದು ಹೇಳಲಾಗಿದೆ. ಪರ್ಷಿಯಾ ರಷ್ಯಾಗಳಿಗಾದ 42 ರ ಒಪ್ಪಂದಕ್ಕೆ ವಿರುದ್ಧವಾಗಿ ಪರ್ಷಿಯಾ ಅನೇರಿಕಾಕ್ಕೆ ಎಣ್ಣೆ ಸೌಲಭ್ಯ ಕೊಡಲು ಹೊಂಟಿರುವ ನುಸೂಬೆಯೇ ರಷಾ ಕಣ್ಣು ಕೆರಳಿಸಬೇಕೆಂದು ಹೇಳಲಾಗಿದೆ.

ಂ ಂ

ಟೆಹರಾನ್, ಮಾ 16 — ರಷ್ಯಾ ಸೈನ್ಯ ಟೆಹರಾನ್ ಬಾಗಿಲಿಗೆ ಒಂದಿರುವ ದೆಂದು ವದಂತಿ. ಇರಾನ್ ಮತ್ತು ಟರ್ಕಿ ವ್ಯಯದಿಂದ ಒಂದು ಕೂಡಾರ್ ಸಂಸ್ಥಾನವನ್ನು ಸ್ಥಾಪಿಸಬೇಕೆಂಬುದು ರಷದ ಆಶಯವೆಂದು ಹೇಳಲಾಗಿದೆ.

ಂ ಂ

ನೆಲ್ಲೂರು, ಮಾ 17 — ನೆಲ್ಲೂರು ದೇವಾಲಯ ಗರ್ವಗಿರ್ಜಿಗಳು ಹರಿಜನರನ್ನು ದೇವಾಲಯಕ್ಕೆ ಬಿಡಲು ಒಪ್ಪಿರುವರು. ಪ್ರತ್ಯೂರು ಶ್ರೀರಾಮಲು ಶೆಟ್ಟರು ಆಚರಿಸಿದ ಉಪವಾಸ ಪ್ರಭಾವವಿದು

ಂ ಂ

ನವದೆಹಲಿ, ಮಾ 16 — ಮೂವತ್ತಾರು ಸಾವಿರ ಟನ್ ಆಹಾರವು ಭಾರತಕ್ಕೆ ಬರುವದೆಂದು ಹೇಳಲಾಗಿದೆ.

ಂ ಂ

ಮದರಾಸು, ಮಾ 17 — ಕ್ಯಾ || ಲಕ್ಷ್ಮಿಯು ಬರುವ ಬುಧವಾರ ಇಲ್ಲಿಗೆ ಬರುವ ನಿರೀಕ್ಷಣೆಯಿದೆ.

ಡಿಗ್ರಿಗಳ ಮುಷ್ಕರನೇ ?

ಕನ್ನಂಬಾಡಿಯಿಂದ ಒಂದು ವಿಶೇಷ ಸುದ್ದಿ ಬಂದಿದೆ. ಅಲ್ಲಿ ಸುಮಾರು 20 ಮಂದಿ ವಿಶ್ವವಿದ್ಯಾನಿಲಯದ ಪದವೀಧರರಿರುವಂತೆ, ಅವರು ' ಡಿಗ್ರಿಗಳ ಸಂಘ ' ಎಂಬುದಾಗಿ ಸಂಘವೊಂದನ್ನು ಕೆಲದಿನಗಳ ಹಿಂದೆ ಸ್ಥಾಪಿಸಿದರಂತೆ. ಡಿಗ್ರಿ ಪಡೆದವರಿಗೆ ತೀರಾ ಅಲ್ಪ ವೇತನ ದೊರೆಯುತ್ತಿರುವುದಾಗಿಯೂ, ಇತರರಿಗೆ ತನುಗಿಂತ ಹೆಚ್ಚು ವೇತನ ದೊರೆಯುತ್ತಿರುವುದೆಂದೂ, ಇದನ್ನು ಪ್ರತಿಭಟಿಸುವ ಸಲುವಾಗಿ ಈ ತಿಂಗಳ ಅಂತ್ಯದಿಂದ ಮುಷ್ಕರಹೂಡುವುದಾಗಿ ತಿಳಿಯಬಂದಿದೆ.

ಮ್ಯಾಜಿಸ್ಟ್ರೇಟರಿಗೆ ಮುತ್ತಿಗೆ

ಛಾಖ್ರಾನಾ ಜಿಲ್ಲೆಯ ಹೊಟೊಡೀರೋ ಪಟ್ಟಣದ ಮ್ಯಾಜಿಸ್ಟ್ರೇಟರಾದ ಮಿ || ಲೀಲಾರಾಮು ಎಂಬವರು ತಮ್ಮ ಸರ್ಕಾರಿ ನೌಕರನೊಂದಿಗೆ ಬಾಂಗುಲ—ದೇರೋಲ್ ರಸ್ತೆಗುಂಟ ತಿರುಗಾಡಲಿಕ್ಕೆ ಹೋದಾಗ ಕೆಲವು ದರೋಡೆಖೋರರು ಅವರನ್ನು ಮುತ್ತಿ ನೈಮೇಲಿನ ಅರಿವೆಗಳನ್ನು ಕಸಿದುಕೊಂಡು ಹೊಡೆದು ಗಾಯಪಡಿಸಿದರಂತೆ. ಅವರು ಆಸ್ಪತ್ರೆಗೆ ದಾಖಲ್ಪಟ್ಟಿರುವರು. ಸರಕಾರಿ ನೌಕರನೂ ಕೂಡಾ ರೂ. 15 ಕಳಗೂಂಡಿರುವನಂತೆ.

ಹೊಟ್ಟೆಗಿಲ್ಲದೆ ಸಾವು

ಗ್ವಾಲ್ಹೇರಿ ಸಂಸ್ಥಾನದೊಳಗಿನ ಜವದ ಎಂಬಲ್ಲಿ ಅನ್ನ ಧಾನ್ಯ ಸಿಗುವುದು ಬಹಳ ಕಠಿಣವಾಗಿರುವುದರಿಂದ ಎಷ್ಟೋ ಜನರು ಹೊಟ್ಟೆಗಿಲ್ಲದೆ ಸಾಯುವ ಪ್ರಸಂಗ ಒದಗಿದೆ. ಅತಿ ಶ್ರೀಮಂತರು ಬಹಳ ತುಟ್ಟಿಯಿಂದ ಮತ್ತು ಇತರ ರೀತಿಯಿಂದ ಹೇಗೋ ಧಾನ್ಯ ದೊರೆಕಿಸುತ್ತಿದ್ದಾರೆ. ಆದರೆ ಬಡವರು ಮೊತ್ತ ಸಾಯುತ್ತಿದ್ದಾರೆ. ಇದರಲ್ಲಿ ಬಹು ಮಂದಿ ಕೂಲಿಗಾರರಿರುವರು.

Epilepsy & Hysteria

CURED FOR EVER

By smelling this wonderful herb when attacked by Fits, a black worm 1-1/4 " long will come with the sneeze of the patient. The patient will get a miracle cure of the diseases for ever. Apply in English to—

Shri 108 Mahatma Sidhbab
P. O. Nagod (Jubbulpore

ನೂರೆಂಬರ್ಗ್, ಮಾ 8 — ಗೋರಿಂಗನ್ನು ಹಿಟ್ಲರು 1943 ನೇ ವಸಂತ ಕಾಲದಲ್ಲಿ ದಸ್ತಗಿರಿ ಮಾಡಿಸಿದ್ದನೆಂಬ ವಿಚಾರ ಗೋರಿಂಗನ ವಿಚಾರಣೆಯಲ್ಲಿ ಹೊರಪಟ್ಟಿದೆ

ಕರಾಚಿ ಮಾ 15 — ಅಗಾಖಾನ ದಂಪತಿಗಳಿಗೆ ಪೌರಸಭೆ ಮಾನ ಪತ್ರವನ್ನರ್ಪಿಸಿತು.

ಮದರಾಸು ಮಾ 8— 2 ವರ್ಷದ ಕೆಳಗಿನ ಮಕ್ಕಳಿಗೂ, ಬಸಿರಿ ಬಾಣಂತಿಯರಿಗೆ ಉಚಿತವಾಗಿ ಹಾಲನ್ನು ಕೊಡಲು ಮದರಾಸು ಸರ್ಕಾರದವರು ಏರ್ಪಡಿಸುವರಾಗಿದ್ದಾರೆ.

ಬೊಂಬಾಯಿ, ಮಾ 10 — ಅಮೇರಿಕಾದಿಂದ ಎರಡೂವರೆ ಸಾವಿರ ಟನ್ ಪೆನ್ಸಿಲಿನ್ ಒಂದಿದೆ.

|| ವಂದೇಮಾತರಂ ||

ಶ್ರೇಷ್ಠವಾದ

ರಾಜಪುರಿ ಹೊಗೇಸೊಪ್ಪಿನಿಂದ

— ತಯಾರಿಸಲ್ಪಟ್ಟ —

ಕಾಂಗ್ರೆಸ್

(ರಿಜಿಸ್ಟರ್ಡ್)

ಮಂಗಳೂರು ಬೀಡಿಗಳು

ಜೆ. ಎಸ್. ಟೊಬ್ಯಾಕೊ ವರ್ಕ್ಸ್

ಬಸ್ ಟರ್ಮಿನಸ್ ಮೈಸೂರು

At Opera

2 ನೇ ವಾರ

ಮೆಹತಾಬ್ — ಸುರೇಂದ್ರ

ಪಾತ್ರವಹಿಸಿರುವ

.... ವಿಶ್ವಾಸ್....

At Ranjit

From 10-3-46

Shirin Farad

— with —

RAGINI & JAYANT

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘಸವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. ೩-೪-೦ ಮಾತ್ರ.

ನಮ್ಮ ಸುಫಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಂಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.



ಹಸಕ ಬೆಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸಕ
ಶಿವರಾಂಪೇಟೆ ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಅಲ್ಪ ವ್ಯಯದ ಕಾಯಕಲ್ಪ

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಸಂಜೀವನ

ಶಕ್ತಿಸುಧಾ

ಬೆಲೆ ಡಬ್ಬಿಗೆ ರೂ. ೧.೮-೦

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು